ಬಿಡಿ ಬಿಡಿಯಾಗಿ ಮೈಯಿಡೀ ಹರಡಿಕೊಳ್ಳುತ್ತಿತ್ತು.

ತಾನು... ತಾನು... ಗೆದ್ದೆನೆಂದು ಬೀಗುತ್ತಿದ್ದೆನಲ್ಲವೇ...

ಹಣದಿಂದ, ಐಶ್ವರ್ಯದಿಂದ ಕೊಳ್ಳಲಾರದ್ದು ಭೂಮಿಯಲ್ಲಿ ಖಂಡಿತವಾಗಿ ಇದೆ. ಕೊಳ್ಳಬಲ್ಲನೇ ಈ ಮುದ್ದು ಮಗುವಿನ ಪ್ರೀತಿಯನ್ನು, ಎಷ್ಟು ಕೋಟಿ ಕೊಟ್ಟರೆ ಇವಳು ತನ್ನನ್ನು ಪ್ರೀತಿಸಬಲ್ಲಳು...

ವನಿತಾಳ ಕಂಗಳ ತುಂಬಾ ಕಂಬನಿ ಮಡುಗಟ್ಟಿತ್ತು. ಅವಳು ಪ್ರಕೃತಿಯನ್ನು ಎದೆಗಪ್ಪಿ ಹಿಡಿದು ಭಾರವಾದ, ಆರ್ದ್ರವಾದ ಕಂಪಿತ ದನಿಯಲ್ಲಿ ಉಸುರಿದಳು:

'ಅಳಬೇಡ ಚಿನ್ನು, ನೀನು ಆ ಹೆಂಗಸಿನ ಜೊತೆಗೆ ಹೋಗಬೇಡ, ನೀನು ನಿನ್ನ ಕುಟುಂಬದ ಜೊತೆಗೇ ಇರು. ಆ ಹೆಂಗಸು ಬೇಕಾದರೆ ಯಾವುದಾದ್ರೂ ಅನಾಥಾಶ್ರಮದ ಮಗುವನ್ನ ದತ್ತು ತಗೆದುಕೊಳ್ಳಲಿ, ನೀನೇನೂ ಯೋಚನೆ ಮಾಡಬೇಡ. ನಾನು ನಿನ್ನ ಆ ಮಮ್ಮಿಗೆ ಬುದ್ಧಿ ಹೇಳ್ತೀನಿ, ಆದರೆ ಒಂದು ಕಂಡೀಷನ್ನು...'

ಪ್ರಕೃತಿ ಬಿಕ್ಕುತ್ತಲೇ 'ಹೇಳೀ ಆಂಟೀ' ಅಂದಳು.

'ನೀನು ನಂಗೆ ಫ್ರೆಂಡ್ ಆಗ್‌ಬೇಕು... ನಂಜೊತೆ ಫೋನಿನಲ್ಲಿ ಮಾತಾಡಬೇಕು... ನಾನು ಕೊಡೋ ಗಿಫ್ಟ್‌ಗಳನ್ನ ತಗೋಬೇಕು... ಯಾವಾಗ್ಲಾದ್ರೂ ನಮ್ಮನೆಗೆ ಬರ್ತಿರಬೇಕು... ಆಮೇಲೆ... ಆಮೇಲೆ... ನಿನ್ನ ಮದುವೆಗೆ ನನ್ನನ್ನು ಮರೀದೇ ಕರೀಬೇಕು...'

ವನಿತಾಳ ದನಿ ಕಂಪಿಸಿದಾಗ ಪ್ರಕೃತಿ ನಾಚಿಕೊಂಡರೂ ಗಂಭೀರವಾಗಿ ಅವಳ ಕೈ ಮೇಲೆ ಕೈ ಒತ್ತಿದಳು. 'ಪ್ರಾಮೀಸ್... ತಾರಾ ಆಂಟಿ. ನಿಮ್ಮ ಪರ್ಸನಲ್ ನಂಬರ್ ಕೊಡೀ... ಪ್ಲೀಸ್.'

ವನಿತಾ ಮೇಲೆದ್ದು ನಿಂತು ಪುಷ್ಪಲತಾಗೆ ಹೇಳಿದಳು:

'ಮೇಡಂಗೆ ಈ ಕೇಸ್‌ನ ಸ್ಟಾಪ್ ಮಾಡೋಕೆ ಹೇಳಿ ಬಿಡೀ ಪುಷ್ಪಲತಾ. ಜಡ್ಜ್‌ಮೆಂಟ್ ನಂಗೆ ಇವತ್ತೆ ಸಿಕ್ಕಾಯ್ತು. ಮೇಡಂ ಫೀಸ್‌ನ ಅವರ ಬ್ಯಾಂಕ್ ಅಕೌಂಟ್‌ಗೆ ಹಾಕ್ತೀನಿ... ಬೈ' ಹೇಳುತ್ತ ಪ್ರಕೃತಿಯನ್ನು ತೋಳಿನಲ್ಲಿ ಬಳಸಿ ನಕ್ಕಳು, 'ಬಾ ಪುಟ್ಟ, ನಿಂಗೆ ಐಸ್ ಕ್ರೀಂ ಕೊಡಿಸಿ, ಟ್ಯಾಕ್ಸೀಲಿ ಮನೆಗೆ ಕಳಿಸ್ತೀನಿ... ನನ್ನ ಫೋನ್ ನಂಬರ್ ತಗೋ... ನಾವಿಬ್ರೂ ಇನ್ಮೇಲೆ ಕ್ಲೋಸ್ ಫ್ರೆಂಡ್ಸು...'

## ಶೈಲಜಾ ಸುರೇಶ್

ಲೇಖಕಿ ಹಾಸನದವರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. 'ಹೊಂಗನಸು', 'ಇಂದಿರಾ', 'ಹೃದಯ ರಾಗ', 'ಮಾಮರವೆಲ್ಲೋ– ಕೋಗಿಲೆಯೆಲ್ಲೊ', 'ಬರೆದೆ ನೀನು ನಿನ್ನ ಹೆಸರ...' ಸೇರಿದಂತೆ ಆರು ಕಾದಂಬರಿಗಳನ್ನು ಬರೆದಿದ್ದಾರೆ. 'ಅಕ್ಕಮ್ಮ ಮತ್ತು ಇತರ ಕತೆಗಳು', 'ಬದುಕು ಬರಿಯ ಭ್ರಮೆಯೇ', 'ಆವರ್ತ', 'ಅನಾವರಣ', 'ಯಾವ ಹೂವು ಯಾರ ಮುಡಿಗೊ' ಸೇರಿದಂತೆ 10 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ.

ಅವರ ಅನೇಕ ಕತೆಗಳು ದೂರದರ್ಶನದಲ್ಲಿ ಕಿರುಚಿತ್ರಗಳಾಗಿ, ಆಕಾಶವಾಣಿ ಕಾರ್ಯಕ್ರಮಗಳಾಗಿ ಮೂಡಿ ಬಂದಿವೆ. ಬಾನುಲಿ ರೂಪಕಗಳ ಪುಸ್ತಕ– 'ಬಾನುಲಿ ರೂಪಕಗಳು'.